*ಸುವರ್ಣ ಕರ್ನಾಟಕ 2006-07*

# ನಗರಸಭಾ ಕಾರ್ಯಾಲಯ, ರಾಮನಗರ

ನಸರಾ/ಕಾವಿ/ಟೆಂಡರ್/6/2006-07 ದಿ: 30.08.2006

## ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಮತ್ತು ನಗರಸಭೆಯಲ್ಲಿ 2006-07 ನೇ ಸಾಲಿನಲ್ಲಿ ನೊಂದಣಿ ಮಾಡಿಕೊಂಡ ಗುತ್ತಿಗೆದಾರರಿಂದ ನಗರಸಭಾ ನಿಧಿ ಮತ್ತು ಎಸ್.ಎಫ್.ಸಿ. ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ನಿಗಧಿತ ನಮೂನೆಯಲ್ಲಿ ಮೊಹರಾದ ಶೇಕಡವಾರು ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಪೌರಾಯುಕ್ತರು ನಗರಸಭೆ, ರಾಮನಗರ ಇವರಿಂದ ಕರೆಯಲಾಗಿದೆ.

1. ಗುತ್ತಿಗೆದಾರರು ಸಂಬಂಧಿಸಿದ ಗುತ್ತಿಗೆ ನೊಂದಣಿ ಪ್ರತಿಯೊಂದಿಗೆ ಟೆಂಡರ್ ಫಾರಂಗಾಗಿ ದಿ: 13.09.2006 ಸಾಯಂಕಾಲ 4.00 ಘಂಟೆಯೊಳಗಾಗಿ ಫಾರಂ ಶುಲ್ಕ ರೂ. 500=00+ ತೆರಿಗೆ ಪಾವತಿಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

2. ಖಾಲಿ ಟೆಂಡರ್ ಫಾರಂಗಳನ್ನು ದಿ: 16.09.2006 ಸಾಯಂಕಾಲ 5.00 ಘಂಟೆವರೆಗೆ ವಿತರಿಸಲಾಗುವುದು.

3. ಭರ್ತಿ ಮಾಡಿದ ಮೂಲ ಮತ್ತು ನಕಲು ಟೆಂಡರ್ ಫಾರಂಗಳನ್ನು ದಿ: 22.09.2006 ಸಾಯಂಕಾಲ 4.30 ಘಂಟೆಯೊಳಗಾಗಿ ಸ್ವೀಕರಿಸಲಾಗುವುದು ಹಾಗು ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಅಥವಾ ಮುಂದಿನ ದಿನಗಳಲ್ಲಿ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

4. ಇ.ಎಂ.ಡಿ. ಹಣವನ್ನು ನಗದಾಗಿ ಈ ನಗರಸಭೆಯಲ್ಲಿ ಪಾವತಿಸಿದ ರಶೀದಿ ಅಥವಾ ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಖರೀದಿಸಿ ಲಗತ್ತಿಸುವುದು ಅಥವಾ ರಾಷ್ಟ್ರೀಯ ಉಳಿತಾಯ (NSC) ಪತ್ರವನ್ನು (ಹಾಲಿ ಚಾಲ್ತಿಯಲ್ಲಿರುವ) ಪೌರಾಯುಕ್ತರಿಗೆ ಪ್ಲೆಡ್ಜ್ ಮಾಡಿ ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಇ.ಎಂ.ಡಿ/ NSC ಹಣವನ್ನು ಸಲ್ಲಿಸತಕ್ಕದ್ದು ಇಲ್ಲವಾದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5. ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಮತ್ತು ಅಂದಾಜು ಪತ್ರಗಳನ್ನು ಪೂರ್ವಭಾವಿಯಾಗಿ ಪರಿಶೀಲಿಸಿಕೊಂಡು ಟೆಂಡರ್ ದರಪಟ್ಟಿ ಸಲ್ಲಿಸತಕ್ಕದ್ದು. ಆನಂತರ ತಕರಾರಿಗೆ ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಪಿ.ಡಬ್ಲ್ಯೂ.ಡಿ ಕೋಡ್ 65 ರಲ್ಲಿ ನಮೂದಾಗಿರುವ ಎಲ್ಲಾ ಷರತ್ತುಗಳಿಗೂ ಬದ್ದರಾಗಿರತಕ್ಕದ್ದು.

6. ಟೆಂಡರ್‌ದಾರರು ಟೆಂಡರ್ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

7. ಟೆಂಡರ್‌ದಾರರು ಟೆಂಡರ್ ಲಕೋಟೆಯ ಮೇಲೆ ಟೆಂಡರ್ ಕ್ರ.ಸಂ. ಮತ್ತು ಕಾಮಗಾರಿ ಹೆಸರನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು ಹಾಗೂ ಗುತ್ತಿಗೆದಾರರು ತಮ್ಮ ಪೂರ್ಣ ಅಂಚೆ ವಿಳಾಸವನ್ನು ಟೆಂಡರ್ ಲಕೋಟೆ ಮತ್ತು ಟೆಂಡರ್ ದರ ಪಟ್ಟಿಯಲ್ಲಿ ತಪ್ಪದೇ ಬರೆಯತಕ್ಕದ್ದು.

8. ಟೆಂಡರ್ ಮಂಜೂರಾತಿ ಪಡೆದ ಗುತ್ತಿಗೆದಾರರು ನಗರಸಭೆಯ ಪೌರಾಯುಕ್ತರು, ಅಭಿಯಂತರರು ನೀಡುವ ಸಲಹೆ ಮತ್ತು ತಾಂತ್ರಿಕ ನಿಯಮದಂತೆ ಕಾಮಗಾರಿ ನಿರ್ವಹಿಸಲು ಬದ್ದರಾಗಿರತಕ್ಕದ್ದು.

9. ಕಾಮಗಾರಿ ನಿರ್ವಹಣೆಗೆ ಪಾವತಿಸಲಾಗುವ ಬಿಲ್ಲು ಮೊಬಲಗಿನ ನಂತರ ಬರಬಹುದಾದ ಯಾವುದೇ ಆಡಿಟ್ ಆಕ್ಷೇಪಣೆಗೆ ಗುತ್ತಿಗೆದಾರರನ್ನೇ ನೇರವಾಗಿ ಹೊಣೆಗಾರರನ್ನಾಗಿ ಗುರಿಪಡಿಸಲಾಗುತ್ತದೆ ಇದಕ್ಕೆ ಬದ್ದರಾಗಿರತಕ್ಕದ್ದು.

PDF Created with deskPDF PDF Writer - Trial :: http://www.docudesk.com

10. ಮಂಜೂರಾತಿ ಪಡೆದ ಗುತ್ತಿಗೆದಾರರು ನಿಗಧಿಪಡಿಸಿದ ಕಾಲಾವಧಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದಿದ್ದಲ್ಲಿ ಅಂತಹ ಗುತ್ತಿಗೆದಾರರ ಬಗ್ಗೆ ಹತ್ತನೇ ಷರತ್ತಿನಲ್ಲಿ ನಮೂದಿಸಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡ ನಂತರ ಸ್ಥಳದಲ್ಲಿ ಉಳಿಯಬಹುದಾದ ಅನುಪಯುಕ್ತ ಸಾಮಾಗ್ರಿಗಳನ್ನು ಅಭಿಯಂತರರು ಸೂಚನೆಯಂತೆ ತೆಗೆದುಹಾಕಿಸಿ ಸ್ವಚ್ಚಗೊಳಿಸಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

11. ಟೆಂಡರ್ ದರಪಟ್ಟಿ ಮಂಜೂರಾತಿಯ ನಗರಸಭೆ ಕಾಯ್ದೆ ನಿಯಾವಳಿಯಂತೆ ಮಂಜೂರಾತಿ ಕಾಯ್ದಿರಿಸಲಾಗಿದೆ.

12. ಟೆಂಡರ್ ಮಂಜೂರಾತಿಯಾದ ಗುತ್ತಿಗೆದಾರರು ಛಾಪಾ ಕಾಗದದ ಮೂಲಕ ಮುಚ್ಚಳಿಕೆ ಸಲ್ಲಿಸಿ ಒಂದು ವಾರದಲ್ಲಿ ಸಂಬಂಧಿಸಿದ ಅಭಿಯಂತರರುಗಳಿಂದ ಕಾಮಗಾರಿ ನಿರ್ವಹಣ ಸ್ಥಳವನ್ನು ಗುರ್ತು ಮಾಡಿಸಿಕೊಂಡು ಕಾಮಗಾರಿ ಪ್ರಾರಂಭಿಸತಕ್ಕದ್ದು ತಪ್ಪಿದಲ್ಲಿ ಠೇವಣಿ ಹಣವನ್ನು ನಗರಸಭೆಗೆ ಅಮಾನತ್ತುಗೊಳಿಸಿ ಈ ಕಾಮಗಾರಿ ನಿರ್ವಹಣೆಯಿಂದ ಉಂಟಾಗಬಹುದಾದ ನಷ್ಟ ಮತ್ತು ತುಷ್ಟಿಗಳಿಗೆ ಟೆಂಡರ್‌ದಾರರೇ ನೇರ ಹೊಣೆಗಾರರಾಗಿರುತ್ತಾರೆ. ಅಂತಹ ಗುತ್ತಿಗೆದಾರರುಗಳ ವಿರುದ್ಧ ಅಗತ್ಯ ಶಿಸ್ತಿನ ಕ್ರಮಕೈಗೊಳ್ಳಲಾಗುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಳ್ಳಲಾಗಿದೆ.

13. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ/ಹಿಂತೆಗೆದುಕೊಳ್ಳುವ ರದ್ದು ಪಡಿಸುವ ಹಕ್ಕನ್ನು ಈ ಕೆಳ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

14. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಸಿದ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಯವರೆಗೆ ಗುತ್ತಿಗೆದಾರರೇ ಯಾವುದೇ ವೆಚ್ಚ ನಿರೀಕ್ಷಿಸದೆ ನಿರ್ವಯಿಸತಕ್ಕದ್ದು.

15. ಬಿಲ್ಲುಗಳಲ್ಲಿ ಸರ್ಕಾರ ಸೂಚಿಸಿರುವ ತೆರಿಗೆಗಳನ್ನು ಕಠಾಯಿಸಲಾಗುವುದು.

16. ಟೆಂಡರ್ ನಿಗಧಿತ ಷೆಡ್ಯೂಲ್ ದರಗಳಿಗಿಂತ ಕಡಮೆ ದರ ನಮೂದಿಸಿರುವ ಗುತ್ತಿಗೆದಾರರು ಅಂತಹ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮೂಲಕ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು ಮತ್ತು ನಿಗಧಿತ ವ್ಯತ್ಯಾಸದ ಮೊತ್ತಕ್ಕಿಂತ ಕಡಿಮೆ ಡಿ.ಡಿ. ಇದ್ದ ಪಕ್ಷದಲ್ಲಿ ತಿರಸ್ಕರಿಸಲಾಗುವುದು.

17. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಬಂದು ಪಡೆಯಬಹುದಾಗಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಗಳಲ್ಲಿ) | ಇ.ಎಂ.ಡಿ | ಕೆಲಸ ಪೂರ್ಣ ಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|
| *ನಗರಸಭಾ ನಿಧಿ* | | | | | |
| 1 | ವಾರ್ಡ್ ನಂ.7 ರಲ್ಲಿ ಬರುವ ಛತ್ರದ ಬೀದಿ ಆಂಜನೇಯಸ್ವಾಮಿ ದೇವಸ್ಥಾನದ ದಕ್ಷಿಣ ಭಾಗಕ್ಕೆ ಬಾಕ್ಸ್ ಚರಂಡಿ ನಿರ್ಮಾಣ | 60,000 | 1500 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 2 | ವಾರ್ಡ್ ನಂ.7ರ ಅಗ್ರಹಾರ ಬಡಾವಣೆಯ ಹಿಂಭಾಗದ ಲಾಯರ್ ತೀರ್ಥರವರ ಮನೆಯಿಂದ ಕಾಳಯ್ಯನವರ ಮನೆಯವರೆಗೆ ಮಣ್ಣು ತೆಗೆಯುವುದು. | 70,000 | 1750 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 3 | ವಾರ್ಡ್ ನಂ.5ರ ನಿವೃತ್ತ ಫಾರೆಸ್ಟರ್ ಬಸವರಾಜುರವರ ಮನೆಹತ್ತಿರ ಚಪ್ಪಡಿ ಚರಂಡಿ ನಿರ್ಮಾಣ | 43,000 | 1100 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 4 | ವಾರ್ಡ್ ನಂ.10ರ ಮಸೀದಿ ಹಿಂಭಾಗದ ಬಾಕ್ಸ್ ಚರಂಡಿ ಮೇಲೆ ಡಕ್‌ಸ್ಲಾಬ್ ನಿರ್ಮಾಣ | 9,000 | 225 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |

PDF Created with deskPDF PDF Writer - Trial :: http://www.docudesk.com

| | | | | | |
|---|---|---|---|---|---|
| 5 | ವಾರ್ಡ್ ನಂ.29 ರ ಮಸೀದಿ ಮುಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ | 36,000 | 900 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 6 | ವಾರ್ಡ್ ನಂ.12 ರಲ್ಲಿ ಕದಿರೇಶ್ ಮನೆಯಿಂದ ಮಿನಿಟ್ಯಾಂಕ್ ವರೆಗೆ ಡಾಂಬರೀಕರಣ. | 30,000 | 800 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 7 | ವಾರ್ಡ್ ನಂ.8 ರ ರಾಘವೇಂದ್ರ ಕಾಲೋನಿಯಲ್ಲಿ ಡಾಂಬರೀಕರಣ | 48,000 | 1200 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 8 | ವಾರ್ಡ್ ನಂ.8 ರ ಬನ್ನಿಮಹಾಕಾಳಮ್ಮ ದೇವಸ್ಥಾನದ ಎದುರು ರಸ್ತೆಗೆ ಡಾಂಬರೀಕರಣ | 1,62,000 | 4100 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 9 | ವಾರ್ಡ್ ನಂ.3 ರ ನಂಜಪ್ಪ ಬಡಾವಣೆಯ ಕ್ರೀಡಾಂಗಣ ರಸ್ತೆಗೆ ಡಾಂಬರೀಕರಣ | 1,58,000 | 4000 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 10 | ವಾರ್ಡ್ ನಂ.7ರ ಛತ್ರದಬೀದಿ ರಾಘವೇಂದ್ರ ಸ್ವಾಮಿ ಮಠದಿಂದ ಶ್ರೀರಾಮ ದೇವಸ್ಥಾನದವರೆಗೆ ಡಾಂಬರೀಕರಣ | 3,86,000 | 9700 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 11 | ವಾರ್ಡ್ ನಂ.14ರ ಪುರ ಪೋಲೀಸ್ ಠಾಣೆ ಹತ್ತಿರ ಅಭಿವೃದ್ಧಿಪಡಿಸುವುದು | 1,65,000 | 4200 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 12 | ವಾರ್ಡ್ ನಂ.20ರ ತುರುಪಲಾಯ ಪೇಶಿಯ ಫರತ್ ನಿವೇಶನದ ಹತ್ತಿರ ಬಾಕ್ಸ್ ಚರಂಡಿ ನಿರ್ಮಾಣ | 50,000 | 1250 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 13 | ವಾರ್ಡ್ ನಂ2 ರ ವಿನಾಯಕನಗರ ಬಡಾವಣೆ ರಂಗರಾಜು ಮನೆಹತ್ತಿರ ಆರ್.ಸಿ.ಸಿ ಡೆಕ್‌ಸ್ಲಾಬ್ ನಿರ್ಮಾಣ | 25,000 | 650 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 14 | ವಾರ್ಡ್ ನಂ.2 ರ ತೆಂಗಿನತೋಟದ ಕರಿ ಈರಪ್ಪ ನಿವೇಶನದ ಹತ್ತಿರ ಚರಂಡಿ ನಿರ್ಮಾಣ | 35,000 | 900 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 15 | ವಾರ್ಡ್ ನಂ.28ರಲ್ಲಿ ಬರುವ ವಿದ್ಯಾಪೀಠ ಹಿಂಭಾಗ ಕೆ.ಇ.ಬಿ ಬಾಷ ಮನೆಯಿಂದ ಮೋಹನ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 3,60,000 | 9000 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 16 | ವಾರ್ಡ್ ನಂ. 18ರ ಪೂಲ್‌ಬಾಗ್ ಬಡಾವಣೆಯಲ್ಲಿರುವ ಗೋವದಾಲಯವನ್ನು ದುರಸ್ಥಿ ಮಾಡಲು ಹಾಗೂ ನೀರು ಸರಬರಾಜು ಕಲ್ಪಿಸಲು. | 2,21,000 | 5600 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| *ಎಸ್.ಎಫ್.ಸಿ. ಅನುದಾನ* | | | | | |
| 17 | ವಾರ್ಡ್.ನಂ.15ರ ಮೋತಿನಗರದ ಬಡಾವಣೆಗಳಲ್ಲಿ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಯನ್ನು ಮೆಟಲಿಂಗ್ ಮಾಡುವುದು | 1,00,000 | 2500 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |

(ಸೈಯದ್ ಖಿಜರ್ ಪಾಷ)
ಅಧ್ಯಕ್ಷರು
ನಗರಸಭೆ,ರಾಮನಗರ

(ಶಿವಣ್ಣ)
ಪೌರಾಯುಕ್ತರು
ನಗರಸಭೆ,ರಾಮನಗರ

PDF Created with deskPDF PDF Writer - Trial :: http://www.docudesk.com